ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU
CITY UNIVERSITY

Office of the Registrar (Evaluation), Central College Campus, Dr.AmbedkarVeedhi,
Bengaluru – 560 001. E-mail: registrarevlubcu@gmail.com, Ph.No.080-2229555

BCU/EX/Quo/Hiringvechl/UG,PG&BEd/Exams/2022-23 12446 Date: 25.01.2023

**ಕೊಟೇಷನ್**

**ವಿಷಯ: ದಿನದ ಬಾಡಿಗೆ ಆಧಾರದ ಮೇಲೆ ಕಾರುಗಳನ್ನು ಸರಬರಾಜು ಮಾಡಲು ಕೊಟೇಷನ್.**

*******

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಫೆಬ್ರವರಿ/ಮಾರ್ಚ್/ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಪರೀಕ್ಷೆಗಳಿಗೆ, ಪರೀಕ್ಷೆಗಳು ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ಜಾಗೃತ ದಳದ ತಂಡ ಭೇಟಿ ನೀಡಬೇಕಾಗಿರುವುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸುಮಾರು 03 ಟೊಯೋಟಾ ಏಟಿಯಸ್/ ಮಾರುತಿ ಡಿಸೈರ್ ಕಾರುಗಳು ಬೇಕಾಗಿರುತ್ತವೆ.

ಮೇಲೆ ಹೇಳಿದ ಮಾದರಿ ಕಾರುಗಳನ್ನು ದಿನದ ಬಾಡಿಗೆ ಆಧಾರದ ಮೇಲೆ ಸರಬರಾಜು ಮಾಡಲು ಏಜೆನ್ಸಿ ಹಾಗೂ ಕಂಪನಿಗಳಿಂದ ದರಪಟ್ಟಿಯನ್ನು (ಕೊಟೇಷನ್) ಕರೆಯಲಾಗಿದೆ. ಆಸಕ್ತಿಯುಳ್ಳ ಕಾರುಗಳ ಮಾಲಿಕರು/ ಸರಬರಾಜುದಾರರು/ ಸಂಸ್ಥೆಗಳು ತಮ್ಮ ದರಪಟ್ಟಿಯನ್ನು ಮತ್ತು ನಿಬಂದನೆಗಳನ್ನು ದಿನಾಂಕ 02.02.2023 ರಂದು ಸಂಜೆ 4.00 ಗಂಟೆಯ ಒಳಗೆ ಸಲ್ಲಿಸತಕ್ಕದ್ದು. ಕೊಟೇಷನ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿ ಹಾಗೂ ಲಕೋಟೆ ಮೇಲೆ ಟೊಯೋಟಾ ಏಟಿಯಸ್/ ಮಾರುತಿ ಡಿಸೈರ್ ಕಾರುಗಳ ಸರಬರಾಜಿಗೆ "ದರಪಟ್ಟಿ (ಕೊಟೇಷನ್)" ಎಂದು ನಮೂದಿಸತಕ್ಕದ್ದು. ನಿಗದಿತ ದಿನಾಂಕದ ನಂತರ ಬಂದ ಕೊಟೇಷನ್ನುಗಳನ್ನು ಪರಿಗಣಿಸಲಾಗುವುದಿಲ್ಲ. ನಿಗಧಿತ ಸಮಯದಲ್ಲಿ ಸ್ವೀಕರಿಸಿರುವ ಕೊಟೇಷನ್ನುಗಳನ್ನು ದಿನಾಂಕ 03.02.2023 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವುದು. ಈ ಸಂದರ್ಭದಲ್ಲಿ ಇಚ್ಚೆಯುಳ್ಳ ಕೊಟೇಷನ್ ಸಲ್ಲಿಸಿರುವವರು ಹಾಜರಿರಬಹುದು.

ಕೊಟೇಷನ್‌ನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕುಲಸಚಿವರು(ಮೌಲ್ಯಮಾಪನ)ರವರು ಹೊಂದಿರುತ್ತಾರೆ.

**ಕುಲಸಚಿವರು(ಮೌಲ್ಯಮಾಪನ)**

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001